## ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ. ದಿವಾಕರ್ ಶಾಸ್ತ್ರಿ ಬಿನ್ ಕೃಷ್ಣ ಶಾಸ್ತ್ರಿ, ಕಾರ್ಯದರ್ಶಿ ಮತ್ತು ಪ್ರಭಾರ ಪಿ.ಡಿ.ಓ ಬಸವಪಟ್ಟಣ ಗ್ರಾಮ ಪಂಚಾಯಿತಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ ಇವರ ವಿರುದ್ಧ ಲೋಕಾಯುಕ್ತ ವಿಚಾರಣೆ – ಅಂತಿಮ ಆದೇಶ ಹೊರಡಿಸುವ ಕುರಿತು.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/649/ಗ್ರಾಪಂಅ/2014, ಬೆಂಗಳೂರು, ದಿನಾಂಕ:10-11-2014.
2. ಅಪರ ನಿಬಂಧಕರು ವಿಚಾರಣೆಗಳು-11, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮಾನ್ಯ ಉಪಲೋಕಾಯುಕ್ತರಿಗೆ ಸಲ್ಲಿಸಿದ ವಿಚಾರಣಾ ವರದಿ ಸಂಖ್ಯೆ: LOK/INQ/14-A/587/2014/ARE-11,
ದಿನಾಂಕ:31.08.2018.
3. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಶಿಫಾರಸ್ಸು ಸಂಖ್ಯೆ: LOK/INQ/14-A/587/2014/ARE-11, ದಿನಾಂಕ:03-09-2018.
4. ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ:ಗ್ರಾಅಪ/649/ಗ್ರಾಪಂಅ/2014, ದಿನಾಂಕ:25.09.2018
5. ಶ್ರೀ. ದಿವಾಕರ್ ಶಾಸ್ತ್ರಿ ಬಿನ್ ಕೃಷ್ಣ ಶಾಸ್ತ್ರಿ, ಇವರು ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ: 12.10.2018

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ. ದಿವಾಕರ್ ಶಾಸ್ತ್ರಿ ಬಿನ್ ಕೃಷ್ಣ ಶಾಸ್ತ್ರಿ, ಕಾರ್ಯದರ್ಶಿ ಮತ್ತು ಪ್ರಭಾರ ಪಿ.ಡಿ.ಓ ಬಸವಪಟ್ಟಣ ಗ್ರಾಮ ಪಂಚಾಯಿತಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 14-ಎ ರಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಗಿತ್ತು. ಅದರಂತೆ ಅಪರ ನಿಬಂಧಕರು ವಿಚಾರಣೆಗಳು-11, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ಸದರಿಯವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 11 ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿರುತ್ತಾರೆ.

"ದೋಷಾರೋಪಣೆ":

### CHARGE

"That you DGO by name, Sri. Divakar Shastri, while working as Secretary & I/c. Panchayath Development Officer, Basavapatna Grama Panchayath, Gangavathi Taluk, Koppal District, since the complainant's father got deleted (his father's) name from the records and gave entire property of one acre converted as N.A in land Sy.No.36/3 of Basavapatanna Purchased from Sri. Dhananjaya to complainant, Sri.

Lingappa S/o Sangappa Kumar R/o Hirebenkal, Taluk Gangavathi and the said land was standing in his (complainant's) name. As such, to convert the said land into plots, the complainant got prepared a blue print for tha purpose and gave an application on 25.11.2015 to DGO requesting to give new number to each such plot made by him in the said land for making entries in the records of Panchayath of Basavaptanna. But you DGO and said Panchayath had not taken any action on it, though the complainant made representations again on 07.03.2012 to panchayath and also on 27.09.2012 to Taluk Panchayath at Gangavathi also wo. In turn, had asked to DGO to take necessary steps on his said application by giving plot numbers. On 16.02.2013, when the complainant met you DGO at your residence situated on hosalli road at Gangavathi, you DGO demanded bribe of Rs. 50,000/- to attend his said work, besides telling that fee of Rs. 49000/- also requires to be paid and as the complainant unwilling to pay the bribe lodged complaint before police inspector, Karnataka lokayukta police station, koppal and who registed the case in Cr.No. 02/2013 u/s 13(1) (d) r/w 13(2) of P.C. Act 1988. On 21.02.2013 complainant met you DGO at your residence and you DGO had taken the tainted (bribe) amount (Rs. 50,000/-) from the complainant in connection with his said work and thereby you DGO has failed to maintain absolute integrity and devotion to duty, and caused dereliction of duty and the said acts of you were unbecoming of a Government Servant and thereby committed official misconduct as enumerated u/s 3(1)(i) to (iii) of Karnataka Civil Service (Conuct) Rules 1966".

ವಿಚಾರಣಾಧಿಕಾರಿಗಳು ಮೇಲೆ ಕ್ರಮ ಸಂಖ್ಯೆ(2) ರಲ್ಲಿ ಓದಲಾದ ವರದಿಯಲ್ಲಿ ಶ್ರೀ. ದಿವಾಕರ್ ಶಾಸ್ತ್ರಿ ಬಿನ್ ಕೃಷ್ಣ ಶಾಸ್ತ್ರಿ, ಕಾರ್ಯದರ್ಶಿ ಮತ್ತು ಪ್ರಭಾರ ಪಿ.ಡಿ.ಓ ಬಸವಪಟ್ಟಣ ಗ್ರಾಮ ಪಂಚಾಯಿತಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ ಇವರ ವಿರುದ್ಧದ ಆರೋಪವು ಸಾಬೀತಾಗಿದೆಯೆಂದು ನಿರ್ಣಯಿಸಿರುತ್ತಾರೆ. ಸದರಿಯವರ ವಿರುದ್ಧ ಸಾಬೀತಾಗಿರುವ ಆರೋಪಕ್ಕೆ ಅನುಗುಣವಾಗಿ "ಕರ್ನಾಟಕ ನಾಗರೀಕ ಸೇವಾ ನಿಯಮ 214(1)(ಎ) ಅಡಿಯಲ್ಲಿ ಪ್ರದತ್ತವಾದ ಅಧಿಕಾರದ ಅಡಿ ಅವರ "ಪಿಂಚಣಿಯ ಶೇ. 50 ರಷ್ಟನ್ನು ಶಾಶ್ವತವಾಗಿ ತಡೆಹಿಡಿಯುವ" ದಂಡನೆ ವಿಧಿಸಲು ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ವರದಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಈ ಸಂಬಂಧ ಶ್ರೀ. ದಿವಾಕರ್ ಶಾಸ್ತ್ರಿ ಬಿನ್ ಕೃಷ್ಣ ಶಾಸ್ತ್ರಿ, ಕಾರ್ಯದರ್ಶಿ ಮತ್ತು ಪ್ರಭಾರ ಪಿ.ಡಿ.ಓ ಬಸವಪಟ್ಟಣ ಗ್ರಾಮ ಪಂಚಾಯಿತಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ ಇವರಿಗೆ ನಿಯಮಾನುಸಾರ ಕ್ರಮಸಂಖ್ಯೆ (4) ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ವಿಚಾರಣಾಧಿಕಾರಿಯವರ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಯೊಂದಿಗೆ 2ನೇ ಕಾರಣ ಕೇಳುವ ನೋಟೀಸ್‌ನ್ನು ಜಾರಿಗೊಳಿಸಲಾಗಿತ್ತು. ಈ ನೋಟೀಸಿಗೆ ಅವರು ಮೇಲೆ ಕ್ರಮ ಸಂಖ್ಯೆ (5) ರಲ್ಲಿ ಓದಲಾದ ಮನವಿ ಮೂಲಕ ತಮ್ಮ ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ.

ಆಪಾದಿತ ನೌಕರರು ಸರ್ಕಾರದ 2ನೇ ಕಾರಣ ಕೇಳುವ ನೋಟಿಸಿಗೆ ನೀಡಿರುವ ಲಿಖಿತ ಹೇಳಿಕೆಯಲ್ಲಿ ಕೆಳಕಂಡ ಪ್ರಮುಖ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

1. ನಾನು 4-1-2006 ರಂದು ಜೇಷ್ಠತಾ ಆಧಾರದ ಮೇಲೆ ಬಿಲ್ ಕಲೆಕ್ಟರ್ ಹುದ್ದೆಯಿಂದ ಕಾರ್ಯದರ್ಶಿ ಎಂದು ನೇಮಕಾತಿಗೊಂಡು ಕರ್ತವ್ಯ

ನಿರ್ವಹಿಸತೊಡಗಿದ್ದು, ನನ್ನ ವಯೋನಿವೃತ್ತಿಯು ಅಂದಿನಿಂದ ಕೇವಲ 9 ವರ್ಷಗಳ ಕಾಲ ಉಳಿದಿತ್ತು, ನಾನು ತಾತ್ಕಾಲಿಕ ಹುದ್ದೆಯಲ್ಲಿಯೇ ಸುಮಾರು 20 ವರ್ಷಗಳ ಕಾಲ ಸೇವೆ ಸಲ್ಲಿಸಿರುತ್ತೇನೆ.

2. ನನ್ನ ಸೇವಾ ಅವಧಿಯಲ್ಲಿ ನಾನು ಸರ್ಕಾರದಿಂದ ದೊರೆಯುತ್ತಿದ್ದ ಸೌಲಭ್ಯ ಅಂದರೆ ವೇತನದ ಹೊರತಾಗಿ ನಾನು ಯಾವುದೇ ಸಾರ್ವಜನಿಕರಿಂದ ಯಾವುದೇ ಹಣ ಪಡೆದಿರುವುದಿಲ್ಲ, ಅಲ್ಲದೇ ಸರ್ಕಾರದ ಹಣ ದುರುಪಯೋಗಪಡಿಸಿಕೊಂಡಿರುವುದಿಲ್ಲ.

3. ಈ ಪ್ರಕರಣ/ವಿಚಾರಣೆ ನಡೆದು ಇಂದಿಗೆ ಸುಮಾರು 5 ವರ್ಷಗಳಾಗಿದ್ದು, ಈ ಅವಧಿಯಲ್ಲಿ ಪ್ರಕರಣ ನಡೆದ ತನಿಖೆ ಪ್ರಾರಂಭಗೊಂಡಾಗ ನನ್ನ ಸೇವಾ ಅವಧಿ ಇನ್ನು 2 ವರ್ಷಗಳು ಮಾತ್ರ ಉಳಿದಿತ್ತು. ನಂತರ ನಾನು ನಿವೃತ್ತನಾಗಿದ್ದು, ಇಂದಿಗೆ ನಾನು ನಿವೃತ್ತನಾಗಿ 03 ವರ್ಷಗಳಾಗಿದ್ದು, ಇಲ್ಲಿಯವರೆಗೆ ನನಗೆ ಯಾವುದೇ ಹಣಕಾಸಿನ ಸೌಲಭ್ಯ ದೊರೆತಿರುವುದಿಲ್ಲ.

4. ನನ್ನ ಕುಟುಂಬದಲ್ಲಿ ನಾನು ನನ್ನ ಹೆಂಡತಿ ಮತ್ತು ಇಬ್ಬರು ಗಂಡು ಮಕ್ಕಳು ಒಟ್ಟು ನಾಲ್ಕು ಜನರಿದ್ದು, ಇದರಲ್ಲಿ ನನ್ನ ಹಿರಿಯ ಮಗ ಬಿ.ಸಿ.ಎ ಪ್ರಥಮ ವರ್ಷದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು, ಕಿರಿಯ ಮಗ ಪಿ.ಯು.ಸಿ ಪ್ರಥಮ ವರ್ಷದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾನೆ. ನನ್ನ ಮಕ್ಕಳೂ ಸಹ ಚಿಕ್ಕವರಿರುವ ಕಾರಣ, ನಾನು ಆರ್ಥಿಕವಾಗಿ ತುಂಬಾ ಕುಸಿದು ಹೋಗಿದ್ದು, ಜೀವನ ನಡೆಸಲು ಕುಟುಂಬ ನಿರ್ವಹಣೆ ಮಾಡಲು ತುಂಬಾ ತೊಂದರೆ ಅನುಭವಿಸುತ್ತಿದ್ದೇನೆ.

5. ನನಗೆ ನನ್ನ ನೌಕರಿಯ ಹೊರತಾಗಿ ಯಾವುದೇ ಆದಾಯದ ಮೂಲಗಳು ಇರುವುದಿಲ್ಲ, ಅಲ್ಲದೇ ಯಾವುದೇ ಆಸ್ತಿ-ಪಾಸ್ತಿಗಳು ಇರುವುದಿಲ್ಲ. ನನ್ನ ಹಿರಿಯರು ಮಾಡಿದ ಒಂದು ಹಳೇ ಮನೆ ಗದಗ ಜಿಲ್ಲೆ, ಗದಗ ತಾಲ್ಲೂಕಿನ ಮುಳಗುಂದ ಗ್ರಾಮದಲ್ಲಿದ್ದು, ಇದಕ್ಕೆ ನಾನು ಮತ್ತು ನನ್ನ ಹಿರಿಯ ಸಹೋದರನ ಪಾಲು ಹೊಂದಿರುತ್ತೇವೆ.

6. ಮಾನ್ಯರೇ, ನಾನು ಮೂಲತಃ ಪುರೋಹಿತ ಕುಟುಂಬಕ್ಕೆ ಸೇರಿದ ಬಡ ಬ್ರಾಹ್ಮಣನಿದ್ದು, ನನ್ನ ತಂದೆಯವರು ಮೂಲತಃ ಕೀರ್ತನಕಾರರಾಗಿದ್ದು, ನನಗೆ ಹಿರಿಯರ ಆಸ್ತಿ ಪಾಸ್ತಿಯಾಗಲೀ ಅಥವಾ ನಾನು ಮಾಡಿದ ಯಾವುದೇ ಆಸ್ತಿಪಾಸ್ತಿ ಇರುವುದಿಲ್ಲ.

7. ಈಗ ತಾವುಗಳು ಉಲ್ಲೇಖಿತ ನೋಟೀಸಿನಲ್ಲಿ ತಿಳಿಸಿದ್ದಂತೆ ಮಾನ್ಯ ಲೋಕಾಯುಕ್ತರ ಶಿಫಾರಸ್ಸಿನಂತೆ ನನಗೆ ಸರ್ಕಾರದಿಂದ ನನ್ನ ನಿವೃತ್ತಿಗೆ ಸಂಬಂಧಿಸಿದಂತೆ ಬರಬೇಕಾದ ಸೌಲಭ್ಯದಲ್ಲಿ ಶೇಕಡಾ 50% ರಷ್ಟು ಕಟಾವು ಮಾಡಿದಲ್ಲಿ ನನ್ನ ಮುಂದಿನ ಜೀವನ ತುಂಬಾ ಕಷ್ಟಕರವಾಗುವುದರಲ್ಲಿ ಯಾವುದೇ ಸಂದೇಹವಿರುವುದಿಲ್ಲ, ಅಲ್ಲದೇ ಈಗ ನನಗೆ ವಯಸ್ಸಾಗಿದ್ದರಿಂದ ಕುಟುಂಬ ನಿರ್ವಹಣೆಗೆ ಏನಾದರೂ ಮಾಡಬೇಕೆಂದರೂ ಆರ್ಥಿಕವಾಗಿ, ಮಾನಸಿಕವಾಗಿ ಮತ್ತು ದೈಹಿಕವಾಗಿ ಸಧೃಢನಿರುವುದಿಲ್ಲ, ಅಲ್ಲದೇ ನನ್ನ ಚಿಕ್ಕ ಮಕ್ಕಳಿಂದ ಕೂಡ ಯಾವುದೇ ನಿರೀಕ್ಷೆ ಮಾಡಲು ಸಾಧ್ಯವಿಲ್ಲ. ಅಲ್ಲದೇ ಈ ವಿಚಾರಣೆಯ ಆದೇಶದ ಕುರಿತಯ ಮೇಲ್ಮನವಿ ಸಲ್ಲಿಸಲು ಸಹ ನಾನು ಆರ್ಥಿಕವಾಗಿ ಸಬಲನಿಲ್ಲದ ಕಾರಣ ನಾನು ಮಾಡದೇ ಇರುವ ಕಾರ್ಯಕ್ಕೆ ಬೆಲೆಯನ್ನು ತೆರಲು ಸಿದ್ಧನಾಗಬೇಕಿದೆ.

ಕಾರಣ ದಯಾಳುಗಳಾದ ತಾವುಗಳು ನನ್ನ ಈ ಹೇಳಿಕೆಯನ್ನು ಮಾನವೀಯ ದೃಷ್ಟಿಯಿಂದ ಪರಿಗಣಿಸಿ ನಾನು ತಿಳಿಸಿದ ಎಲ್ಲಾ ವಿಷಯಗಳು ನೂರು ಸತ್ಯವಿದ್ದು, ಇದರಲ್ಲಿ ಯಾವುದೇ ಸುಳ್ಳು ಮಾಹಿತಿ ಇರುವುದಿಲ್ಲ, ಆದ್ದರಿಂದ ಇವೆಲ್ಲವನ್ನೂ ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ವಿನಂತಿಸಿರುತ್ತಾರೆ.

ವಿಚಾರಣಾಧಿಕಾರಿಯವರು ತಮ್ಮ ವರದಿಯಲ್ಲಿ ಆಪಾದಿತರ ವಿರುದ್ಧದ ಆರೋಪಗಳನ್ನು ಸಾಬೀತು ಪಡಿಸಲು ಪ್ರಮುಖವಾಗಿ ವರದಿಯಲ್ಲಿ ಮೇಲ್ಕಂಡ ಅಂಶಗಳನ್ನು ಅಲ್ಲಗಳೆಯಲು ಸಮರ್ಥವಾದ ಕಾರಣಗಳನ್ನು ನೀಡಿರುತ್ತಾರೆ. ಅವುಗಳ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆ.

"Sri Divakar Shastri, Secretory and in-charge Panchayath Development Officer, Basavapattana Grama Panchayath, Gangavathi Taluk, Koppala District, DGO while working as Panchayath Development officer at Basavapattana Grama Panchayath, Gangavathi Taluk , Koppala District in the year 2013, in order to extend official favour to the complainant i.e. in connection with the conversion of the nature of use of the land bearing survey number 36/3 at Basavapattana, , Gangavathi Taluk , Koppala District, demanded and accepted illegal gratification of Rs.5,000/- from the complainant in the residence of the DGO at Hosahalli Road, Gangavathi on 21.02.2013 between 7.45 P.M. and 8.00P.m. and during investigation conducted by the Police Inspector attached to Lokayukta Police Staion, Koppala the DGO failed to offer satisfactory explanation for Possession of tainted notes and thereby DGO is guilty of misconduct within the purview of Rule 3 (1)(i) to (iii) of The Karnataka Civil Service (Conduct) Rules, 1966 is proved.

ವಿಚಾರಣಾ ನಡವಳಿ, ದಾಖಲೆಗಳು ಮತ್ತು ಸಾಕ್ಷ್ಯಾಧಾರಗಳನ್ನು ವಿವರವಾಗಿ ಪರಿಶೀಲಿಸಿದೆ. ವಿಚಾರಣಾಧಿಕಾರಿಯವರು ವಿವರವಾದ ಸಮರ್ಥನೆಯೊಂದಿಗೆ ಆರೋಪವನ್ನು ಸಾಬೀತುಪಡಿಸಿರುತ್ತಾರೆ. ಮಾನ್ಯ ಉಪಲೋಕಾಯುಕ್ತರು ವಿಚಾರಣಾ ವರದಿಯನ್ನು ಅಂಗೀಕರಿಸಿ ಆರೋಪದ ತೀವ್ರತೆಗೆ ಅನುಗುಣವಾಗಿ ಶ್ರೀ. ದಿವಾಕರ್ ಶಾಸ್ತ್ರಿ ಬಿನ್ ಕೃಷ್ಣ ಶಾಸ್ತ್ರಿ, ಕಾರ್ಯದರ್ಶಿ ಮತ್ತು ಪ್ರಭಾರ ಪಿ.ಡಿ.ಓ ಬಸವಪಟ್ಟಣ ಗ್ರಾಮ ಪಂಚಾಯಿತಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ ರವರಿಗೆ "ಕರ್ನಾಟಕ ನಾಗರೀಕ ಸೇವಾ ನಿಯಮ 214(1)(ಎ) ಅಡಿಯಲ್ಲಿ ಪ್ರದತ್ತವಾದ ಅಧಿಕಾರದ ಅಡಿ ಅವರ "ಪಿಂಚಣಿಯ ಶೇ. 50 ರಷ್ಟನ್ನು ಶಾಶ್ವತವಾಗಿ ತಡೆಹಿಡಿಯುವ" ದಂಡನೆ ವಿಧಿಸಲು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/649/ಗ್ರಾಪಂಅ/2014, ಬೆಂಗಳೂರು, ದಿನಾಂಕ:20-12-2018.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಶ್ರೀ. ದಿವಾಕರ್ ಶಾಸ್ತ್ರಿ ಬಿನ್ ಕೃಷ್ಣ ಶಾಸ್ತ್ರಿ, ಕಾರ್ಯದರ್ಶಿ ಮತ್ತು ಪ್ರಭಾರ ಪಿ.ಡಿ.ಓ ಬಸವಪಟ್ಟಣ ಗ್ರಾಮ ಪಂಚಾಯಿತಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ ಇವರಿಗೆ "ಕರ್ನಾಟಕ ನಾಗರೀಕ ಸೇವಾ ನಿಯಮ 214(1)(ಎ) ಅಡಿಯಲ್ಲಿ ಪ್ರದತ್ತವಾದ ಅಧಿಕಾರದ ಅಡಿ ಅವರ "ಪಿಂಚಣಿಯ ಶೇ. 50 ರಷ್ಟನ್ನು ಶಾಶ್ವತವಾಗಿ ತಡೆಹಿಡಿಯುವ" ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

3. ಅಪರ ನಿಬಂಧಕರು, ವಿಚಾರಣೆಗಳು-11, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಕೊಪ್ಪಳ ಜಿಲ್ಲೆ.
6. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ.
7. ಶ್ರೀ. ದಿವಾಕರ್ ಶಾಸ್ತ್ರಿ ಬಿನ್ ಕೃಷ್ಣ ಶಾಸ್ತ್ರಿ, ಕಾರ್ಯದರ್ಶಿ ಮತ್ತು ಪ್ರಭಾರ ಪಿ.ಡಿ.ಓ. (ನಿವೃತ್ತ), ಶ್ರೀ ವಿಷ್ಣು ಕಂಪ್ಯೂಟರ್ಸ್ ಮತ್ತು ಜೆರಾಕ್ಸ್, ಹಳೇ ತಹಶೀಲ್ದಾರ ಕಛೇರಿ ಎದುರಿಗೆ, ಗಂಗಾವತಿ -583227.
8. ಗಣಕ ಕೋಶ.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ.